(b) The stadium taken up for construction are at different stages. It is difficult to give the actual dates for completing all these stadia.

(c) Part of the expenditure has to come from people's contribution. In some of the Districts it is very difficult to collect people's contribution. Hence there is delay in completing the construction of stadium works.

NRWS Scheme for Indi Taluk

118 SRI S. S. ARAKERI (Balloli) Will the Minister for Rural Development and Panchayat Raj be pleased to state,—

(a) the number of villages in Indi Taluk benefited by National Rural Water Supply Scheme ;

(b) the number of such villages and their names ;

(c) the date of commencement and the time required for completion ;

(d) total amount estimated and so far the amount spent ?

SRI B. RAMAIAH. (Minister for Rural Development and Panchayath Raj) —

(a) One.

(b) One Village *i. e.*, Chandachan Village.

(c)—

Date of Commencement	Date of completion	Duration
15-1-1971	6-2-1973	2 years

(d) Estimated cost Rs 4,04.600 -Expenditure incurred so far Rs. 5,80,968.

REPRSENTATIONS BY MEMBERS

SRI S.M. SHEERNALY CHANDRASHEKAR.—Sir under rule 63, I have given a notice. Some persons, in the early morning of today tried to set fire to our Pradesh Congress I Office. ಇವತ್ತು ಬೆಳಗಿನ ಜಾವ ೨ ಗಂಟೆಯಲ್ಲಿ ಪ್ರದೇಶ ಕಾಂಗ್ರೆಸ್-ಐ ಆಫೀಸಿನಲ್ಲಿ ಬೆಂಕಿ ಅಪಘಾತವಾಗಿದೆ. ರೂಲಿಂಗ್ ಪಾರ್ಟಿ ಆಫೀಸಿಗೆ ಈ ರೀತಿ ಅಪಘಾತವಾಗುವುದಾದರೆ ರಾಜ್ಯದಲ್ಲಿ ಇನ್ಯಾರನ್ನು ಕೇಳಬೇಕು. ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ಎನ್ನುವುದನ್ನು ಹೇಳಬೇಕು.

MR. SPEAKER.—I have received your notice just now.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಎರಡು ಜನ ಮಂಲಗಿಲ್ಲದೇ ಹೋಗಿದ್ದರೆ ಖೂನಿಯಾಗಿರುವುದು. ವಾಚ್‌ಮನ್ ಸಮಯಕ್ಕೆ ಸರಿಯಾಗಿ ಎದ್ದ. ಅವರು ಓಡಿ ಹೋಗಿದ್ದಾರೆ.

ಅಧ್ಯಕ್ಷರು.—ಅರ್ಧ ನಿಮಿಷದ ಕೆಳಗೆ ತಮ್ಮ ನೋಟೀಸ್ ನನ್ನ ಗಮನಕ್ಕೆ ಬಂದಿದೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಇದು ಬಹಳ ಮುಖ್ಯ. ನನ್ನ ಕಾಲಿಂಗ್ ಅಟೆನ್‌ಷನ್ ಮೋಷನ್ಸ್ ಬೇಕಾದಷ್ಟು ಇವೆ. ತಾವು ಹಾಕಿದರೆ ಮಾತ್ರ ಹೇಳುತ್ತೇನೆ. ಇದು ಅಂಥಾದ್ದಲ್ಲ ಅರ್ಜೆನ್ಸಿ ಇರುವುದರಿಂದ ಎತ್ತಿದೆ.

ಅಧ್ಯಕ್ಷರು,—ತಮ್ಮ ನೋಟೀಸ್ ಅರ್ಧ ನಿಮಿಷದ ಕೆಳಗೆ ನನ್ನ ಗಮನಕ್ಕೆ ಬಂದಿದೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಡೆಪ್ಯುಟಿ ಲೀಡರ್ ಇದ್ದಾರೆ ಅವರು ಏನು ಉತ್ತರ ಕೊಡುತ್ತಾರೋ ಹೇಳಲಿ, If the Deputy Leader is prepared to answer I will sit. ಮಾನ್ಯ ಅಧ್ಯಕ್ಷರೇ, ಮಾನ್ಯ ಉಪನಾಯಕರು ಎಲ್ಲಿ ಇದ್ದಾರೆ. ಅವರು ನಮ್ಮ ಹಿಂದಿನ ಜನರಲ್ ಸೆಕ್ರೆಟರಿ ಕೂಡ ಆಗಿದ್ದರು ಅವರಿಗೆ ಇನ್‌ಫರ್ಮೇಷನ್ ಗೊತ್ತಿದೆ.

MR. SPEAKER.—I am not concerned with that. ದಯವಾಡಿ ಸ್ವಲ್ಪ ಕೇಳಿ,

SRI S .M. SHEERNALY CHANDRASHEKAR.—We are concerned that the Dy. Leader should say what action has been taken on behalf of the Government, because he knows the information.

ಅಧ್ಯಕ್ಷರು.—ಅದು ನಿಮ್ಮ ಅವರ ಮಧ್ಯೆ ಇರತಕ್ಕ ವ್ಯವಹಾರ, ದಯವಾಡಿ ಸ್ವಲ್ಪ ಕೇಳಿ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಇದರ ಬಗ್ಗೆ ಸರ್ಕಾರ ಏನಾದರೂ ಹೇಳಿಕೆ ಕೊಡುತ್ತದೆಯೇ

MR. SPEAKER.—I am really sorry with this Hon. Member. will you please hear me. ನಿಮ್ಮ ನೋಟೀಸ್ ಅರ್ಧ ನಿಮಿಷದ ಕೆಳಗೆ ನನ್ನ ಗಮನಕ್ಕೆ ಬಂದಿದೆ. ನಾನು ಅದನ್ನು ಗಮನಿಸಿದ್ದೇನೆ. ಅದನ್ನು ಸರ್ಕಾರದ ಗಮನಕ್ಕೆ ತಂದು ಆ ಮೇಲೆ ತೆಗೆದುಕೊಳ್ಳಬೇಕು. ತತ್‌ಕ್ಷಣ ಅವರು ಉತ್ತರ ಹೇಳುವ ಪರಿಸ್ಥಿತಿಯಲ್ಲಿದ್ದರೆ ಅದು ಬೇರೆ. ಅದನ್ನು ಬಿಟ್ಟು ಒಂದೇ ಉಸಿರಿನಲ್ಲಿ ಹೇಳುತ್ತಾ ಹೋದರೆ, do you want that I should hear you in preference to others.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ವಿಷಯ ಗೊತ್ತಾಗಿದೆ, ಅದರ ಬಗ್ಗೆ ಸರ್ಕಾರ before the House rise a statement will be made.

MR. SPEAKER.—He is going to make a statement before the House rise, ಇಷ್ಟು ಉಸಿರು ಕಟ್ಟಿ ಮಾತನಾಡಿದಿರಿ, ಏನು ಪ್ರಯೋಜನ ಬಂತು.

ಶ್ರೀ ಟಿ. ಚೌಡಯ್ಯ.—ನಾನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟು ೧೦ ದಿವಸ ಆಯಿತು

ಅಧ್ಯಕ್ಷರು —ನಿನ್ನೆ ಬಂತು. ೨೧೦ ಕಾಲಿಂಗ್ ಅಟೆನ್‌ಷನ್ ನೋಟೀಸ್ ಇದೆ.

ಶ್ರೀ ಟಿ. ಚೌಡಯ್ಯ.—ತಮ್ಮ ಗಮನಕ್ಕೆ ನಾನು ಆಗಲೇ ತಂದಿದ್ದೇನೆ.

MR. SPEAKER.—I am very sorry. If the hon.member has got anything, I will come half an hour early, he can meet me in my chambers and discuss, Dont raise it now, From tomorrow onwards I request the hon. members to meet me in my chambers and I shall see that the matters are sorted out. There is no point in raising it here.

ಶ್ರೀ ಡಿ. ಜಯದೇವರಾಜ ಅರಸ್.—ನಾನು ಇವತ್ತು ಬೆಳಿಗ್ಗೆ ನೋಟೀಸ್ ಕೊಟ್ಟಿದ್ದೇನೆ. ಪ್ರವಾಸಿಗರ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಿನ್ನೆ ಸಂಜೆ ಕೆ.ಆರ್. ಸಾಗರದಲ್ಲಿ ೬ ಜನ ಮೃತಪಟ್ಟಿದ್ದಾರೆ. ಇದು ಬಹಳ ತುರ್ತಾದ ವಿಚಾರ. ೬ ಜನ ಸತ್ತಿದ್ದಾರೆ. ನಿನ್ನೆ ನಾನು ಅಲ್ಲಿದ್ದೆ. ೪ ಹೆಣ್ಣು ಮಕ್ಕಳ ಶವ ಮಾತ್ರ ಸಿಕ್ಕಿತ್ತು. ಇಬ್ಬರು ಗಂಡು ಮಕ್ಕಳ ಶವ ಸಿಕ್ಕಿರಲಿಲ್ಲ, ಈಗ ಸಿಕ್ಕಿರಬಹುದು. ೧೨ ಜನ ಕುಳಿತುಕೊಳ್ಳತಕ್ಕ ದೋಣಿಯಲ್ಲಿ ೨೦ ಜನರನ್ನು ಕೂರಿಸಿದ್ದರು. ಅದು ಪಿ.ಡಬ್ಲ್ಯೂ.ಡಿ.ಗೆ

ಸೇರಿದಂಥ ದೋಣಿ. ನಿನ್ನೆ ೭-೫೦ಕ್ಕೆ ಈ ಘಟನೆ ಸಂಭವಿಸಿದೆ. ಯಾರೂ ರಕ್ಷಣೆ ಮಾಡುವ ಜನರು ಇರಲಿಲ್ಲ. ಒಬ್ಬೊಬ್ಬರನ್ನೂ ಈಜಿಕೊಂಡು ಸಾಗಿಸಿಬಿಟ್ಟಿದ್ದಾರೆ. ೪ ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು ಸತ್ತಿದ್ದಾರೆ. ಒಟ್ಟು ೨೦ ಜನ ಆ ದೋಣಿಯಲ್ಲಿದ್ದರು ಸುಮಾರು ಎರಡು ದೋಣಿ ಜನ ಇದ್ದರು. ಪ್ರವಾಸಿಗರಿಗೆ ರಕ್ಷಣೆ ಕೊಡತಕ್ಕದ್ದು ಅವಶ್ಯಕವಾಗಿದೆ. ಯಾರು ಸತ್ತಿದ್ದಾರೆ ಅವರ ಹೆಣಗಳನ್ನು ಸಾಗಿಸುವ ಒಂದು ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕು ಮತ್ತು ಯಾವ ರೀತಿ ಅನುಕೂಲ ಮಾಡಿಕೊಡಬೇಕೋ.....

ಅಧ್ಯಕ್ಷರು.—ನಾನು ಸರ್ಕಾರಕ್ಕೆ ಕಳಿಸುತ್ತೇನೆ. ತಾವೇ ಎಲ್ಲಾ ಹೇಳಿದರೆ ಸರ್ಕಾರಕ್ಕೆ ಏನು ಉಳಿಯಿತು. You are giving all the details. Then, why do you call the attention of the Government. ಮುಳುಗಿದವರಿಗೆ, ತೇಲಿದವರಿಗೆ ರಕ್ಷಣೆ ಕೊಡಬೇಕು ಎಂದು ಎಲ್ಲಾ ಹೇಳಿದರೆ ಸರ್ಕಾರಕ್ಕೆ ಏನು ಉಳಿದಿದೆ.

ಶ್ರೀ ಡಿ. ಜಯದೇವರಾಜ ಅರಸ್.—ಇದು ನಿಧಾನವಾದಂಥ ವಿಚಾರ ಅಲ್ಲ. ತಮ್ಮ ಗಮನಕ್ಕೆ ತಂದಿದ್ದೇನೆ. ಕೇರಳ, ತಮಿಳುನಾಡು, ಮಹಾರಾಷ್ಟ್ರದವರು ಮಡಿದಿದ್ದಾರೆ. ರಕ್ಷಣೆ ಕೊಡುವುದು ಅವಶ್ಯಕತೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Announcement.

MR. SPEAKER.—Before going to the next item, I have to announce that a I have received a letter from Hon. Member Sri B. Basavalingappa stating that he has joined Congress-I Legislature party. I have also received a letter dated 21st March 1981 from the Deputy Leader of the Ka nataka Legislature Congress (I) party stating that Sri B Basavalingappa has been admitted to their party.

SRI A LAKSHMISAGAR.—Sir, this morning I have given a notice under rule 63. Kindly look into that and if it is possible, it may be listed tomorrow.

MR. SPEAKER.—Next item of the agenda, ಗಮನ ಸೆಳೆಯುವ ಸೂಚನೆಗಳು ಶ್ರೀಯುತರುಗಳಾದ ಬಿ.ವಿ. ಕಕ್ಕಿಲಾಯ, ಎ.ಜಿ. ಕೊಡಗಿ ಬಿ.ಎ. ಮೊಹಿದ್ದೀನ್ ಹಾಗೂ ಎಂ.ಸಿ. ನಾನಯ್ಯ ಅವರು.

ಗಮನ ಸೆಳೆಯುವ ಸೂಚನೆ

ವಿಷಯ.—ಮಂಗಳೂರು ಗೊಬ್ಬರ ಕಾರ್ಖಾನೆಯು ಒಂದು ವಿಭಾಗದ ನೌಕರರ ಮುಷ್ಕರದ ಪರಿಣಾಮವಾಗಿ ಕಾರ್ಖಾನೆಯು ಉತ್ಪಾದನೆ ಸ್ಥಗಿತವಾಗಿರುವ ಬಗ್ಗೆ.

ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ಮಂಗಳೂರು ಗೊಬ್ಬರ ಕಾರ್ಖಾನೆಯು ಒಂದು ವಿಭಾಗದ ನೌಕರರ ಮುಷ್ಕರದ ಪರಿಣಾಮವಾಗಿ ಕಾರ್ಖಾನೆಯು ಉತ್ಪಾದನೆ ಸ್ಥಗಿತವಾಗಿರುವುದರಿಂದ ಉಂಟಾಗಿರುವ ಅಪಾರ ನಷ್ಟ ಕುರಿತು ಹಾಗೂ ಈ ವಿಚಾರದಲ್ಲಿ ಸರ್ಕಾರ ಕೈಗೊಂಡ ಕ್ರಮದ ಕುರಿತು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

SRI M. VEERAPPA MOILY. (Minister for Finance)—Mr. Speaker Sir, on behalf of the Chief Minister. I make the following statement